# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ
## ಉತ್ತರಹಳ್ಳಿ ಉಪವಿಭಾಗ

ಸಂಖ್ಯೆ:ಸ.ಕಾ.ಅ/ಉ.ಉ.ವಿ/ಪಿಆರ್/08/2022-23 ದಿನಾಂಕ: 22.04.2022

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶದ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು ದಿನಾಂಕ:**22.04.2022** ರ ಶುಕ್ರವಾರ ಪೂರ್ವಾಹ್ನ **11.00** ಗಂಟೆಗೆ ವಾರ್ಡ್ ನಂ.184 ಉತ್ತರಹಳ್ಳಿ, ವಾರ್ಡ್‌ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

***ಹಾಜರಿದ್ದ ಅಧಿಕಾರಿಗಳು:-***

1. ಶ್ರೀ ಡಿ.ಸುಂದರಯ್ಯ- ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ವೆಂಕಟರಮಣ.ಕೆ.ವಿ -ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184ಉತ್ತರಹಳ್ಳಿ)
3. ಶ್ರೀ ಸಂಕೇತ್ ಕುಮಾರ್ - ಬೃಹತ್ ನೀರುಗಾಲುವೆ ಇಲಾಖೆ
4. ಶ್ರೀ ಶಶಿಕುಮಾರ್ ಕೆ.ಎ- ಹಿರಿಯ ಆರೋಗ್ಯ ಪರಿವೀಕ್ಷಕರು
5. ಶ್ರೀಮತಿ ನಿರ್ಮಲಾ ವೈ.ಎನ್-ಸಹಾಯಕ ಅಭಿಯಂತರರು, 110 ಹಳ್ಳಿ

***ಹಾಜರಿದ್ದ ಸಮಿತಿ ಸದಸ್ಯರು:-***

6. ಶ್ರೀ ಶ್ರೀನಾಥ್ - ಪೂರ್ಣಪ್ರಜ್ಞಾ ಬಡಾವಣೆ RWA
7. ಶ್ರೀ ಎಸ್.ಕೆ.ಸುಧೀಂದ್ರ - ಪೂರ್ಣಪ್ರಜ್ಞಾ ಬಡಾವಣೆ RWA
8. ಶ್ರೀ ಎಸ್.ಸಂಜೀವ್ ಕುಮಾರ್- ಪೂರ್ಣಪ್ರಜ್ಞಾ ಬಡಾವಣೆ RWA
9. ಶ್ರೀ ವಿಜಯಬಾಬು - ಪೂರ್ಣಪ್ರಜ್ಞಾ ಬಡಾವಣೆ RWA
10. ಶ್ರೀ ಬಾಬು-ಹನುಮ ಹಿಲ್ಸ್ RWA
11. ಶ್ರೀ ಅಮರ್.ಎಂ.ಆರ್- ಎ.ಜಿ.ಎಸ್ ಬಡಾವಣೆ RWA
12. ಶ್ರೀ ಅರುಣ್-ಎ.ಜಿ.ಎಸ್ ಬಡಾವಣೆ RWA

***ಗೈರು ಹಾಜರು:-***

1. ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ
2. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಬೊಮ್ಮನಹಳ್ಳಿ ವಲಯ
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಉತ್ತರಹಳ್ಳಿ ಉಪವಿಭಾಗ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ
5. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ
6. ಆರಕ್ಷಕ ನಿರೀಕ್ಷಕರು, ಸಂಚಾರಿ ಪೋಲೀಸ್ ಠಾಣೆ, ಕುಮಾರಸ್ವಾಮಿ ಬಡಾವಣೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ಉಪವಿಭಾಗ
8. ಆರೋಗ್ಯಾಧಿಕಾರಿಗಳು, ಕೋವಿಡ್-19, ಉತ್ತರಹಳ್ಳಿ, ಬೆಂಗಳೂರು ದಕ್ಷಿಣ ವಿಭಾಗ
9. ತೋಟಗಾರಿಕಾ ಸಹಾಯಕರು , ಬೊಮ್ಮನಹಳ್ಳಿ ವಲಯ
10. ಆರಕ್ಷಕ ನಿರೀಕ್ಷಕರು, ಸುಬ್ರಹ್ಮಣ್ಯಪುರ ಪೋಲೀಸ್ ಠಾಣೆ, ಬೆಂಗಳೂರು

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

ಮು.ತಿ.ನೋ

Scanned with CamScanner

**ಕೋವಿಡ್-19ಗೆ ಸಂಬಂಧಪಟ್ಟಂತೆ ಡಾ// ಸುಧಾ, ಪಿ.ಹೆಚ್.ಸಿ ಉತ್ತರಹಳ್ಳಿ ರವರು ಈ ಕೆಳಕಂಡಂತೆ ವಿವರ ನೀಡಿರುತ್ತಾರೆ.**

- 184 ವಾರ್ಡಿನ ಪ್ರಜೆಗಳಿಗೆ ಬೂಸ್ಟರ್ ಡೋಸ್ ವ್ಯಾಕ್ಸಿನ್ ಅನ್ನು ನೀಡಲು ಕೋರಿರುತ್ತಾರೆ. ಹಾಗೂ ವ್ಯಾಕ್ಸಿನ್ ಕ್ಯಾಂಪ್ ಗಳನ್ನು ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಆರೋಗ್ಯಾಧಿಕಾರಿಗಳು, ಕೋವಿಡ್-19 ರವರಿಗೆ ಸೂಚಿಸಿರುತ್ತಾರೆ

**2. ಬೀದಿ ದೀಪಗಳಿಗೆ ಸಂಬಂಧಪಟ್ಟಂತೆ**

- ಎ.ಜಿ.ಎಸ್ ಬಡಾವಣೆಯಲ್ಲಿ ಹಾಳಾಗಿರುವ ವಿದ್ಯುತ್ ದೀಪಗಳನ್ನು ಸರಿಪಡಿಸಲು ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿರುವ ವಿದ್ಯುತ್ ದೀಪಗಳಲ್ಲಿ ಟ್ಯೂಬ್‌ಲೈಟ್ ಇದ್ದು ಎಲ್.ಇ.ಡಿ.ಲೈಟ್ ಗಳನ್ನು ಈ ಕೂಡಲೇ ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೀದಿ ದೀಪ ರವರಿಗೆ ಸೂಚಿಸಿರುತ್ತಾರೆ.

**3. ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಪೂರ್ಣ ಪ್ರಜ್ಞಾ ಬಡಾವಣೆಯಲ್ಲಿ ಎ.ಬಿ.ಸಿ ವಿದ್ಯುತ್ ಕೇಬಲನ್ನು ಅಳವಡಿಸುವ ಕೆಲಸ ಬಾಕಿಯಿದ್ದು, ಈ ಕೂಡಲೇ ಕೆಲಸವನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ 13ನೇ ಮುಖ್ಯರಸ್ತೆಯಲ್ಲಿರುವ ಬಸ್ ನಿಲ್ದಾಣದಲ್ಲಿ ವಿದ್ಯುತ್ ಕಂಬವನ್ನು ಅಳವಡಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆ 10ನೇ ಮುಖ್ಯರಸ್ತೆಯಲ್ಲಿ ತೆರವುಗೊಳಿಸಿರುವ ವಿದ್ಯುತ್ ಕಂಬವನ್ನು ರಸ್ತೆಯ ಬದಿಯಲ್ಲೇ ಇಟ್ಟಿರುವುದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಕೂಡಲೇ ಆ ವಿದ್ಯುತ್ ಕಂಬವನ್ನು ಸ್ಥಳದಿಂದ ತೆರವುಗೊಳಿಸಲು ಕೋರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯ ವಿದ್ಯುತ್ ಏರಿಳಿತ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಲು ಕೋರಿರುತ್ತಾರೆ.
- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಎಲ್ಲಾ ಎ.ಸಿ.ಬಿ ಕೇಬಲ್ ಕೆಲಸಗಳನ್ನು ಕೂಡಲೇ ಪೂರ್ಣಗೊಳಿಸಲು ಕೋರಿರುತ್ತಾರೆ.
- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ 11 ಕೆ.ವಿ ಅಳವಡಿಸುವ ಕೆಲಸವನ್ನು ಪೂರ್ಣಗೊಳಿಸಲು ಕೋರಿರುತ್ತಾರೆ. ಹಾಗೂ ರಸ್ತೆ ಬದಿಯಲ್ಲಿರುವ ಕೇಬಲನ್ನು ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.
- 11 ಕೆ.ವಿ ಜಂಕ್ಷನ್ ಬಾಕ್ಸನ್ನು ರಸ್ತೆಯ ತಿರುವಿನಲ್ಲೇ ಅಳವಡಿಸಿದ್ದು, ವಾಹನ ಸಂಚಾರರಿಗೆ ತೊಂದರೆಯಾಗುತ್ತಿದ್ದು ಕೂಡಲೇ ಸೂಕ್ತ ಜಾಗಕ್ಕೆ ವರ್ಗಾಯಿಸಲು ಕೋರಿರುತ್ತಾರೆ.
- ಸ್ಲಂಪ್ ಪೋಲನ್ನು ಫುಟ್ ಪಾತಿನಲ್ಲಿ ಅಳವಡಿಸಿದ್ದು, ಕೂಡಲೇ ತೆರವುಗೊಳಿಸಿ ಖಾಸಗಿ ಸ್ವತ್ತಿನಲ್ಲಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೆಸ್ಕಾಂ ಎಸ್-18 ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ.

**4. ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ**

- ಪ್ಲಾಸ್ಟಿಕ್ ಬ್ಯಾಗ್‌ಗಳು ವಾರ್ಡ್ ವಾಪ್ತಿಯಲ್ಲಿ ಬಳಕೆಯಲ್ಲಿದ್ದು, ಈ ಕೂಡಲೇ ಸೂಕ್ತ ಕ್ರಮ ಕೈಗೊಂಡು ಪ್ಲಾಸ್ಟಿಕ್ ಬ್ಯಾಗ್ ಗಳನ್ನು ನಿಷೇಧಿಸಲು ಕೋರಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತ ವಾಣಿಜ್ಯ ವಹಿವಾಟುಗಳು ಹೆಚ್ಚಾಗಿದ್ದು, ಅವುಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

Scanned with CamScanner

➢ ಎ.ಜಿ.ಎಸ್ ಬಡಾವಣೆಯ ಪಾರ್ಕಿನ ಬದಿಯಲ್ಲಿರುವ ಒಣ ಕಸವನ್ನು ಈ ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

➢ ಅನಧಿಕೃತವಾಗಿ ನಡೆಸುತ್ತಿರುವ ವಾಣಿಜ್ಯ ವಹಿವಾಟುಗಳಿಗೆ ನೋಟೀಸ್ ಜಾರಿಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಹಿರಿಯ ಆರೋಗ್ಯ ಪರಿವೀಕ್ಷಕರುರವರಿಗೆ ಸೂಚಿಸಿರುತ್ತಾರೆ

**5. ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

➢ ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಉಳಿದಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಕೋರಿರುತ್ತಾರೆ.

➢ ಪೂರ್ಣಪ್ರಜ್ಞಾ ಬಡಾವಣೆಯಲ್ಲಿರುವ ಪಾರ್ಕ್ ನಂ.5 ರ ರಸ್ತೆಯಲ್ಲಿ ಮ್ಯಾನ್ ಹೋಲ್ ಉಕ್ಕಿ ಹರಿಯುತ್ತಿದ್ದು ಸರಿಪಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು,_ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

**6. ಸ.ಕಾ.ನಿ.ಅ ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

➢ ಎ.ಜಿ.ಎಸ್ ಬಡಾವಣೆಯ 3ನೇ ಮುಖ್ಯರಸ್ತೆಯಲ್ಲಿ ಅನಧಿಕೃತವಾಗಿ ಟೆಲಿಕಾಂ ಟವರ್ ಅಳವಡಿಸಿದ್ದು, ತೆರವುಗೊಳಿಸಲು ಕೋರಿರುರತ್ತಾರೆ.

➢ ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಉಳಿದಿರುವ ರಸ್ತೆಗಳನ್ನು ಅಭಿವೃದ್ಧಿ ಮಾಡಲು ಕೋರಿರುತ್ತಾರೆ.

➢ ಮಾನ್ಸೂನ್ ಮಳೆಯ ಮುಂಚಿತವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕಲ್ವರ್ಟ್‌ನ ಹೂಳನ್ನು ತೆಗೆಯಲು ಕೋರಿರುತ್ತಾರೆ.

➢ ವಾರ್ಡ್ ವ್ಯಾಪ್ತಿಯಲ್ಲಿ ಅಳವಡಿಸಿರುವ ಬ್ಯಾನರ್‌ಗಳನ್ನು ಕೂಡಲೇ ತೆರವುಗೊಳಿಸಲು ಕೋರಿರುತ್ತಾರೆ.

➢ ವಾರ್ಡ್ ವ್ಯಾಪ್ತಿಯ ರಸ್ತೆಗಳಿಗೆ ನಾಮಫಲಕ ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಅಭಿಯಂತರರು, ಉತ್ತರಹಳ್ಳಿ ವಾರ್ಡ್ ನಂ.184 ರವರಿಗೆ ಸೂಚಿಸಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಶ್ರೀ ಡಿ.ಸುಂದರಯ್ಯ | ಶ್ರೀ ವೆಂಕಟರಮಣ.ಕೆ.ವಿ |
| ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ | ಸಂಚಾಲಕರು ಹಾಗೂ ಸ.ಅ–184 |
| ಆಂಜನಾಪುರ ಉಪವಿಭಾಗ | |

Scanned with CamScanner